**CC 181/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 181/2017

**ಸಿ ಡಬ್ಲ್ಯೂ** 15

**ಪಿ ಡಬ್ಲ್ಯೂ:** 10

**ಸಾಕ್ಷಿಯ ಹೆಸರು -** **ಲಿಂಗನಗೌಡ ನೆಗಳೂರು**
**ತಂದೆಯ ಹೆಸರು -** **ಬಸವನಗೌಡ**
**ವಯಸ್ಸು -** 45 **ವರ್ಷಗಳು**
**ಉದ್ಯೋಗ -** **ಸಿ ಪಿ ಐ, ಸಂತೆ ಬೆನ್ನೂರು ವೃತ್ತ, ದಾವಣಗೆರೆ**
**ವಾಸಸ್ಥಳ -** **ಸಂತೆ ಬೆನ್ನೂರು**

**ಸಾಕ್ಷಿಯನ್ನು ದಿನಾಂಕ:** 07-02-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿನಾಂಕ: **09-07-2016** ರಿಂದ **29-09-2018** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: **09-07-2016** ರಂದು ಪ್ರಕರಣದ ಕಡತವನ್ನು ಚಾಸಾ **-1** ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ದಿ: **28-10-2016** ರಂದು ಜಿಲ್ಲಾ ಪೋಲಿಸ ಕಚೇರಿ, ಬಳ್ಳಾರಿರವರಿಂದ ಆರೋಪಿತನ ಪಾಸ್ ಪೋರ್ಟ ಪರಿವೀಕ್ಷಣೆಗಾಗಿ ಬಂದ ದಾಖಲೆಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿ ನಿಪಿ: **15** ರಿಂದ **18** ರ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

ದಿ: **08-11-2016** ರಂದು ಪ್ರಾದೇಶಿಕ ಪಾಸ್ ಪೋರ್ಟ ಕಚೇರಿ, ಬೆಂಗಳೂರು ರವರು ನೀಡಿದ ದಾಖಲೆಗಳನ್ನು ಪಡೆದಿರುತ್ತೇನೆ. ಸಾಕ್ಷಿ ದಿ: **06-11-2016** ರ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ: **22** ಎಂದು, ಸಾಕ್ಷಿಯ ಸಹಿಯನ್ನು ನಿಪಿ: **22(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ದಿ: **08-11-2016** ರಂದು ಸ್ವೀಕರಿಸಿರುವ ಪತ್ರ ಮತ್ತು ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಪತ್ರವನ್ನು ಈಗಾಗಲೇ ನಿಪಿಃ 4 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿಃ 4 (ಎ) ಎಂದು ಗುರುತಿಸಲಾಯಿತು. ಸಾಕ್ಷಿ 14 ಪುಟಗಳ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಪಿಃ 23 ರಿಂದ 32 ಎಂದು ಗುರುತಿಸಲಾಯಿತು.

ದಿಃ 27-12-2016 ರಂದು ಎಜಾಸ್ ಅಹ್ಮದ್ ಮತ್ತು ಎಜಾಜ್ ಅಹ್ಮದ್ ರವರು ವಿದ್ಯಾಭ್ಯಾಸ ಮಾಡಿದ ಬಗ್ಗೆ ಎಲ್ ಎಫ್ ಎಸ್ ಶಾಲೆ, ಪಿ ವಿ ಎಸ್ ಬಿ ಸಿ ಪೌಢ ಶಾಲೆ, ವಿನಾಯಕ ಸರಸ್ವತಿ ಶಾಲೆಗಳಿಂದ ದಾಖಲೆಗಳನ್ನು ಸ್ವೀಕಡಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿ ನಿಪಿಃ 6 ರಿಂದ 14 ರ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

ದಿಃ 10-02-2017 ರಂದು ಎಜಾಸ್ ಅಹ್ಮದ್ ಎಂಬ ಆರೋಪಿ ಆತನ ಅಣ್ಣ ಎಜಾಜ್ ಅಹ್ಮದ್ ರವರ ದಾಖಲೆಗಳನ್ನು ಉಪಯೋಗಿಸಿ ತಪ್ಪು ಮಾಹಿತಿ ನೀಡಿ ಪಾಸ್ ಪೋರ್ಟ ಪಡೆದಿರುವುದು ದೃಡಪಟ್ಟಿದ್ದರಿಂದ ಆತನ ವಿರುದ್ಧ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಪಿ ವಾಯ್., ವಕೀಲರಿಂದ**

ಚಾಸಾ -1 ರವರೇ ಪ್ರಕರಣದಲ್ಲಿನ ಪಿರ್ಯಾದುದಾರರು. ಚಾಸಾ -1 ರವರೇ ಪ್ರಕರಣವನ್ನು ದಾಖಲಿಸಿಕೊಂಡಿದ್ದರು. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಚಾಸಾ -1 ರವರಿಂದ ದೂರನ್ನು ಪಡೆದು ಪ್ರಥಮ ವರ್ತಮಾನ ವರದಿ ದಾಖಲಿಸಿದ್ದೆ ಅಂದರೆ ಸರಿಯಲ್ಲ. ಪ್ರಕರಣ ದಾಖಲಾದಾಗ ಚಾಸಾ -1 ರವರೇ ಆರಕ್ಷಕ ನಿರೀಕ್ಷಕರಾಗಿದ್ದರು.

**CC 181/2017**

**ಸಿ ಡಬ್ಲೂ 15**

**ಪಿ ಡಬ್ಲೂ: 10**

ನಿಪಿ: 1 ರ ದೂರನ್ನು ಚಾಸಾ -1 ರವರೇ ನೀಡಿ, ಅವರೇ ಪ್ರಥಮ ವರ್ತಮಾನ ವರದಿಯನ್ನು ಮಾಡಿರುತ್ತಾರೆ. ಪಟ್ಟಣ ಪೋಲಿಸ ಠಾಣೆಯಲ್ಲಿ ಠಾಣಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಾರೆ ಅಂದರೆ ಸರಿ.

ಆರೋಪಿಯ ಹೆಸರು Ajas Ahammed ಎಂದು ಇದ್ದು ಆತನ ತನ್ನ ಅಣ್ಣ Ajaj Ahammed ರವರ ಶಾಲಾ ದಾಖಲೆಗಳನ್ನು ಮತ್ತು ಇತರೆ ದಾಖಲೆಗಳನ್ನು ಉಪಯೋಗಿಸಿ ಪಾಸ್ ಪೋರ್ಟ ಪಡೆದಿದ್ದ ಎಂದು ಈ ಪ್ರಕರಣದ ತನಿಖೆ ಸಮಯದಲ್ಲಿ ನನಗೆ ಗೊತ್ತಾಗಿರುತ್ತದೆ. ಈ ಪ್ರಕರಣದ ದಾಖಲಾಗುವುದಕ್ಕೂ ಮೊದಲೇ ಆರೋಪಿಗೆ ಪಾಸ್ ಪೋರ್ಟ ನೀಡಲಾಗಿತ್ತು ಅಂದರೆ ಸರಿ. ಪಾಸ್ ಪೋರ್ಟ ಅರ್ಜಿ ಸಲ್ಲಿಸಿದ ನಂತರ ಅದರ Verification ನ್ನು ಪೋಲಿಸರೇ ಮಾಡುತ್ತಾರೆ. ಆ ರೀತಿ Verification ಸಮಯದಲ್ಲಿ ಅರ್ಜಿದಾರರನ್ನು ಪ್ರಶ್ನಿಸಿ, ದಾಖಲೆಗಳನ್ನು ಪರಿಶೀಲಿಸಿ ಅಕ್ಕ ಪಕ್ಕದ ಜನರನ್ನು ವಿಚಾರಿಸಿ ವರದಿಯನ್ನು ಸಲ್ಲಿಸಲಾಗುತ್ತದೆ ಅಂದರೆ ಸರಿ. ಈ ಪ್ರಕರಣದಲ್ಲಿ ಆರೋಪಿ ಫೋಟೋವನ್ನು ಬದಲಿಸಿರುತ್ತಾನೆ ಎಂಬುದು ನನ್ನ ಅನಿಸಿಕೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಆ ರೀತಿ ಉದ್ದೇಶ ಪೂರ್ವಕವಾಗಿಯೇ ಪಾಸ್‌ಪೋರ್ಟ ಪಡೆಯಲು ಬದಲಿಸಿರುತ್ತಾನೆ ಎಂದು ನುಡಿಯುತ್ತಾರೆ. ಪಾಸ್ ಪೋರ್ಟ ಅರ್ಜಿಯೊಂದಿಗೆ ಸಲ್ಲಿಸುವ ದಾಖಲೆಗಳನ್ನು ಪೋಲಿಸರೇ ಪರಿಶೀಲನೆ ಮಾಡಿರುತ್ತಾರೆ.

ಆರೋಪಿ ಯಾವ ಉದ್ದೇಶದಿಂದ ಆತನ ಅಣ್ಣನ ದಾಖಲೆಗಳನ್ನು ಪಾಸ್ ಪೋರ್ಟ ಪಡೆಯಲು ಉಪಯೋಗಿಸಿದ್ದ ಎಂದು ನನಗೆ ಗೊತ್ತಿಲ್ಲ. ಪ್ರಕರಣದ ಸಂಪೂರ್ಣ ತನಿಖೆಯನ್ನು ನಾನೇ ಮಾಡಿ ಅಂತಿಮ ವರದಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

ಸಾಕ್ಷಿ ಮುಂದುವರೆದು ನಾನು ಭಾಗಶಃ ತನಿಖೆಯನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿಃ 23 ರ ಅರ್ಜಿಯನ್ನು ಸಲ್ಲಿಸಿದ ದಿನದಂದು ಅಂದರೆ ದಿಃ 07-11-2014 ರಂದು ಆರೋಪಿ ಎಜಾಸ್ ಅಹ್ಮದ್ ರವರಿಗೆ 18 ವರ್ಷ ತುಂಬಿದ್ದವು ಅಂದರೆ ಸರಿ. ಆರೋಪಿ ಎಸ್ ಎಸ್ ಎಲ್ ಸಿ ಉತ್ತೀರ್ಣ ನಾಗಿರುತ್ತಾನೆ ಅಂದರೆ ಸರಿ. ಆತ ತನ್ನ ದಾಖಲೆಗಳನ್ನು ಉಪಯೋಗಿಸಿ ಪಾಸ್ ಪೋರ್ಟಗೆ ಅರ್ಜಿ ಸಲ್ಲಿಸಿ ಪಾಸ್ ಪೋರ್ಟ ಪಡೆಯಲು ಅರ್ಹನಿದ್ದ ಅಂದರೆ ಸರಿ. ನಾನು ಯಾವುದೇ ತನಿಖೆ ಮಾಡದೇ ನನ್ನ ಅಧೀನ ಅಧಿಕಾರಿಗಳು ಸ್ವೀಕರಿಸಿ ನನ್ನ ಮುಂದೆ ಇಟ್ಟಿದ್ದ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲ ಅಂದರೆ ಸರಿಯಲ್ಲ. ಪಾಸ್ ಪೋರ್ಟ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಪೋಲಿಸರೇ ತಪ್ಪು ಮಾಡಿ, ನಮ್ಮ ವಿರುದ್ಧ ಪಾಸ್ ಪೋರ್ಟ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ ಎಂಬ ಕಾರಣದಿಂದ ಆರೋಪಿ ಅಮಾಯಕ ಆಗಿದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ತಾನು ಸಲ್ಲಿಸಿದ್ದ ಅರ್ಜಿಯಲ್ಲಿ Ajaz ಎಂದು ಸಹಿ ಮಾಡಿರುತ್ತಾನೆ. ನನ್ನ ತನಿಖೆಯಲ್ಲಿ ಸದರಿ ಅರ್ಜಿಯ ಮೇಲೆ ಆರೋಪಿ ಮಾಡಿರುತ್ತಾನೆಯೋ ಇಲ್ಲವೋ ಎಂದು ವೈಜ್ಞಾನಿಕ ಪರೀಕ್ಷೆ ಮಾಡಿಸಿ ತಿಳಿದುಕೊಂಡಿಲ್ಲ. ಆರೋಪಿ ಪಾಸ್ ಪೋರ್ಟ ಅರ್ಜಿಯಲ್ಲಿ ಮನೆಯ ವಿಳಾಸವನ್ನು ಸರಿಯಾಗಿಯೇ ಕೊಟ್ಟಿದ್ದ. ಆರೋಪಿ ಪಾಸ್ ಪೋರ್ಟ ಪಡೆಯಲು ನೀಡಿದ್ದ ದಾಖಲೆಗಳಲ್ಲಿ ಮತ್ತು ಆತನ ಶಾಲೆಯಿಂದ ಪಡೆದಿದ್ದ ದಾಖಲೆಗಳಲ್ಲಿ ವಿವರಗಳು ಬೇರೆ ಬೇರೆ ಇದ್ದವು. ನಾನು ಸಲ್ಲಿಸಿರುವ ದಾಖಲೆಗಳಲ್ಲಿ ಸಹ ಸದರಿ ವ್ಯತ್ಯಾಸಗಳು ಗೊತ್ತಾಗುತ್ತವೆ.

**CC 181/2017**

**ಸಿ ಡಬ್ಲೂ 15**

**ಪಿ ಡಬ್ಲೂ: 10**

ಆರೋಪಿ ಸಲ್ಲಿಸಿದ ಅರ್ಜಿಯಲ್ಲಿನ ಜನ್ಮ ದಿನಾಂಕ ಮತ್ತು ಆತನ ಶಾಲಾ ದಾಖಲೆಯಲ್ಲಿನ ಜನ್ಮ ದಿನಾಂಕ ಬೇರೆ ಬೇರೆ ಇರುತ್ತವೆ. ಆ ರೀತಿ ತಾಂತ್ರಿಕ ದೋಷದಿಂದ ವ್ಯತ್ಯಾಸಗಳು ಆಗಬಹುದು ಅಂದರೆ ಸರಿಯಲ್ಲ. ಆರೋಪಿ ಪಾಸ್ ಪೋರ್ಟ ಪಡೆಯಲು ಅರ್ಹನಿದ್ದು, ಆತನ ಪಾಸ್ ಪೋರ್ಟ ಅರ್ಜಿಯ ಪರಿಶೀಲನೆ ಸಂದರ್ಭದಲ್ಲಿ ಪೋಲಿಸರೇ ತಪ್ಪು ಮಾಡಿ ಆತ ಯಾವುದೇ ತಪ್ಪನ್ನು ಮಾಡದಿದ್ದರೂ ಸಹ ಆತನ ವಿರುದ್ದ ನಾನು ಮತ್ತು ಚಾಸಾ -1 ರವರು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.